(12) (12) (112) ನಿ=72 ರಿಂದ

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿ ರವರು ನಿಯಮ-72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:**

ಸರ್ಕಾರದ ಆದೇಶ ಸಂಖ್ಯೆ : ಬೆಂಗಳೂರು, ದಿನಾಂಕ 15-07-2024 ರ ಆದೇಶದಲ್ಲಿ ಅಂತರ್ ಜಿಲ್ಲಾ ವರ್ಗಾವಣೆ ಬಯಸಿದವರು ಒಂದು ಹುದ್ದೆಯಲ್ಲಿ ಕನಿಷ್ಠ 7 ವರ್ಷ ಸೇವೆ ಸಲ್ಲಿಸಿದ ಬಳಿಕ ವರ್ಗಾವಣೆಗೆ ಅರ್ಹರೆಂದು ಮಾರ್ಗಸೂಚಿ ಹೊರಡಿಸಲಾಗಿದೆ.

ಸರ್ಕಾರದ ಈ ಮಾರ್ಗಸೂಚಿಯಿಂದಾಗಿ 10-14 ವರ್ಷಗಳ ಕಾಲ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿ ಪೊಲೀಸ್ ಹೆಡ್ ಕಾನ್ಸ್‌ಟೇಬಲ್‌ಗಳಾಗಿ ಪದೋನ್ನತಿ ಹೊಂದಿ ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಹೆಡ್ ಕಾನ್ಸ್‌ಟೇಬಲ್‌ಗಳ ವರ್ಗಾವಣೆಗೆ ತುಂಬಾ ತೊಂದರೆಯಾಗಿದೆ. 2020 ರಿಂದ ಈವರೆಗೆ ಒಮ್ಮೆಯೂ ಪತಿ-ಪತ್ನಿ ಪ್ರಕರಣದಡಿ ಹೆಡ್ ಕಾನ್ಸ್‌ಟೇಬಲ್‌ಗಳ ವರ್ಗಾವಣೆ ಆಗಿರುವುದಿಲ್ಲ. ಇದು ಅನೇಕ ಕುಟುಂಬಗಳಲ್ಲಿ ಸಮಸ್ಯೆಗಳನ್ನು ಸೃಷ್ಟಿಸಿದ್ದರೆ ಇನ್ನೂ ಕೆಲವು ಕುಟುಂಬಗಳಲ್ಲಿ ವಿವಾಹ ವಿಚ್ಛೇದನೆ ಹಂತಕ್ಕೆ ಹೋಗಿದೆ.

ಈ ಸಿಬ್ಬಂದಿಗಳು ತಮ್ಮ ಸಮಸ್ಯೆಯನ್ನು ಸಚಿವರಾದಿಯಾಗಿ ಸಂಬಂಧಪಟ್ಟವರ ಗಮನಕ್ಕೆ ಹಲವು ಬಾರಿ ತಂದಿದ್ದರೂ ಈವರೆಗೆ ಯಾವುದೇ ಪರಿಹಾರ ದೊರೆತಿಲ್ಲ. ಸರ್ಕಾರ ಕೂಡಲೆ ಹೆಡ್ ಕಾನ್ಸ್‌ಟೇಬಲ್ ಪತಿ-ಪತ್ನಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಈ ಹಿಂದೆ ಹೊರಡಿಸಿರುವ ಮಾರ್ಗ ಸೂಚಿಯಲ್ಲಿರುವ 07 ವರ್ಷಗಳ ಸೇವೆ ಸಲ್ಲಿಸುವ ಷರತ್ತನ್ನು ಪೊಲೀಸ್ ಹೆಡ್- ಕಾನ್ಸ್‌ಟೇಬಲ್‌ಗಳ ಪ್ರಕರಣಗಳಿಗೆ ಸಡಿಲಿಕೆ ಮಾಡಿ ಇವರಿಗೆ ವರ್ಗಾವಣೆಗೆ ಅವಕಾಶವನ್ನು ಕಲ್ಪಿಸುವ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಅಧಿಕಾರಿ/ಸಿಬ್ಬಂದಿಗಳಿಗೆ ಅಂತರ್ ವಲಯ ಹಾಗೂ ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆಗೆ ಅವಕಾಶ ಕಲ್ಪಿಸುವ ಸಲುವಾಗಿ ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು 2022 ಅನ್ನು ರೂಪಿಸಿ ದಿನಾಂಕ: 22.02.2023 ರಿಂದ ಜಾರಿಗೆ ತರಲಾಗಿರುತ್ತದೆ ಹಾಗೂ ಈ ನಿಯಮಗಳಲ್ಲಿ ಕರ್ನಾಟಕ ಸಾಮಾನ್ಯ ನೇಮಕಾತಿ ನಿಯಮಗಳ- 1977ರ ನಿಯಮ 16(ಎ) ಪುನರ್ ಸೇರ್ಪಡೆ ನಿಯಮಗಳನ್ನು ಅಳವಡಿಸಲಾಗಿರುತ್ತದೆ (ಅನುಬಂಧ-ಎ ರಲ್ಲಿ ಒದಗಿಸಿದೆ).

ಪತಿ-ಪತ್ನಿ ಪ್ರಕರಣಗಳ ವರ್ಗಾವಣೆಗಳನ್ನು ಪರಿಗಣಿಸುವ ಉದ್ದೇಶದಿಂದಲೇ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಿಆಸುಇ 215 ಸೇನೇನಿ 2022 ದಿನಾಂಕ: 09.03.2023 ರಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ಕ್ಕೆ ನಿಯಮ 16ಎ ಅನ್ನು ಪುನರ್ ಸೇರ್ಪಡೆ ಮಾಡಿರುತ್ತದೆ. ಈ ಪುನರ್ ಸೇರ್ಪಡೆ ಅಧಿಸೂಚನೆಯಲ್ಲಿ ಪತಿ-ಪತ್ನಿ ಇಬ್ಬರೂ ಸರ್ಕಾರಿ ಸೇವೆಯಲ್ಲಿ ಇರುವ ಪ್ರಕರಣಗಳಿಗೆ ಮಾತ್ರ ಈ ಕೆಳಕಂಡ ಷರತ್ತಿಗೆ ಒಳಪಟ್ಟು ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. (ಅನುಬಂಧ-ಬಿ ರಲ್ಲಿ ಒದಗಿಸಿದೆ).

- ಒಬ್ಬ ಸರ್ಕಾರಿ ನೌಕರನು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಕನಿಷ್ಟ 07 ವರ್ಷ ಸೇವೆಯನ್ನು ಪೂರ್ಣಗೊಳಿಸಿರಬೇಕು.

- ವರ್ಗಾಹಿಸಬೇಕಾದ ಘಟಕ ಅಥವಾ ಸ್ಥಳದಲ್ಲಿ ಮಂಜೂರಾದ ಹುದ್ದೆಯು ಖಾಲಿಯಿರತಕ್ಕದ್ದು.
- ಅಂತಹ ವರ್ಗಾವಣೆಯನ್ನು ಒಂದು ಕೇಡರ್‌ನಿಂದ ಮತ್ತೊಂದು ಕೇಡರಿಗೆ ಮಾಡತಕ್ಕದಲ್ಲ.
- ವರ್ಗಾವಣೆಯನ್ನು ಸರ್ಕಾರಿ ನೌಕರನ ಕೋರಿಕೆ ಮೇಲೆ ಮಾಡಿರುವುದರಿಂದ ಅವರ ಜೇಷ್ಠತೆಯನ್ನು ವರ್ಗಾವಣೆಗೊಂಡ ಘಟಕದಲ್ಲಿನ ಕೇಡರ್‌ನ ಕೊನೆಯ ವ್ಯಕ್ತಿಯ ಕೆಳಗಿರಿಸತಕ್ಕುದ್ದು.
- ವರ್ಗಾವಣೆಯನ್ನು ಸರ್ಕಾರಿ ನೌಕರನ ಸೇವೆಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮಾಡತಕ್ಕುದಲ್ಲ.

ಇಲಾಖೆಯ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ವಿಶೇಷ ನಿಯಮಗಳ ಅಡಿಯಲ್ಲಿ ವರ್ಗಾವಣೆಗಳನ್ನು ಮಾಡಲು ಸರ್ಕಾರವು ಆದೇಶ ಸಂಖ್ಯೆ: ಒಇ 93 ಪಿಪಿಎಸ್ 2022, ದಿನಾಂಕ: 15.07.2024 ರಂದು ಮಾರ್ಗಸೂಚಿಯನ್ನು ಸಹ ಹೊರಡಿಸಿರುತ್ತದೆ (ಅನುಬಂಧ-ಸಿ ರಲ್ಲಿ ಒದಗಿಸಿದೆ). ಈ ಆದೇಶದಲ್ಲಿ ನಿರ್ದಿಷ್ಟಪಡಿಸಿರುವಂತೆ ಆನ್ಲೈನ್ ಪೋರ್ಟಲ್ನಲ್ಲಿ ಸಲ್ಲಿಕೆಯಾಗುವ ಮನವಿಗಳನ್ನು ವರ್ಗಾವಣೆ ಬಯಸುವ ಘಟಕದಲ್ಲಿನ ರಿಕ್ತ ಸ್ಥಾನವು ಶೇಕಡಾ 15ನ್ನು ಮೀರದಿರುವ ನಿರ್ಬಂಧನೆ ಹಾಗೂ ಪ್ರತಿ ವೃಂದದಲ್ಲಿನ ಸೇವಾ ಜ್ಯೇಷ್ಠತೆಯ ಆಧಾರದ ಮೇಲೆ ಮಾತ್ರ ಪರಿಗಣಿಸಲಾಗುತ್ತಿದ್ದು, ಮೊದಲನೆ ಆದ್ಯತೆಯನ್ನು ಪತಿ-ಪತ್ನಿ ಪ್ರಕರಣಕ್ಕೆ ನೀಡಲಾಗುತ್ತದೆ.

ಈ ಸರ್ಕಾರದ ಆದೇಶಗಳನ್ವಯ ರಿಕ್ತಸ್ಥಾನದ ಲಭ್ಯತೆ, ಉಭಯ ಘಟಕಗಳ ಸಹಮತಿ ಮತ್ತು ಸೇವಾ ಜ್ಯೇಷ್ಠತೆಯ ಆಧಾರದ ಮೇಲೆ ಸೇವಾ ಜೇಷ್ಠತೆಯಲ್ಲಿ ಅಂತರ ಜಿಲ್ಲಾ ವರ್ಗಾವಣೆ ಕೋರಿ ಇಲಾಖೆಯಲ್ಲಿ ಸ್ವೀಕೃತವಾಗಿರುವ ವರ್ಗಾವಣಾ ಅರ್ಜಿಗಳನ್ನು ಇಲಾಖೆಯ ಆಡಳಿತ ನಿರ್ವಹಣೆ ಹಾಗೂ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ಧಕ್ಕೆಯಾಗದ ರೀತಿಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು 2022 ದಿನಾಂಕ: 22.02.2023 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಒಇ 93 ಪಿಪಿಎಸ್ 2022, ದಿನಾಂಕ: 15.07.2024 ರನ್ವಯ ಹಂತಹಂತವಾಗಿ ಪತಿ-ಪತ್ನಿ ಪ್ರಕರಣದ ಸಿಬ್ಬಂದಿಗಳನ್ನು ವರ್ಗಾವಣೆಗೆ ಪರಿಗಣಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹೆಡ್‌ಕಾನ್ಸ್‌ಟೇಬಲ್ ಹುದ್ದೆಯು ಸಂಪೂರ್ಣವಾಗಿ ಮುಂಬಡ್ತಿ ಹುದ್ದೆಯಾಗಿದ್ದು, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಮುಂಬಡ್ತಿಗೆ ಮಾತ್ರ ಅವಕಾಶ ಕಲ್ಪಿಸಲಾಗಿರುತ್ತದೆ. ಈ ಹುದ್ದೆಯು ಮುಂಬಡ್ತಿ ಹುದ್ದೆಯಾಗಿರುವುದರಿಂದ ಆಯಾ ಘಟಕಗಳಲ್ಲಿ ರಿಕ್ತ ಹುದ್ದೆ ಲಭ್ಯವಾದ ತಕ್ಷಣ ಆಗಿಂದಾಗ್ಗೆ ಅಯಾ ಜೇಷ್ಟತಾ ಘಟಕದ ಜೇಷ್ಠತೆ, ಮುಂಬಡ್ತಿ ಅರ್ಹತೆ, ಮೀಸಲಾತಿ ಬಿಂದು ಹಾಗೂ ರಿಕ್ತ ಸ್ಥಾನ ಲಭ್ಯತೆ ಆಧರಿಸಿ ಮುಂಬಡ್ತಿ ನೀಡಿ ಭರ್ತಿ ಮಾಡಲಾಗುತ್ತಿದೆ. ಇದರಿಂದಾಗಿ ವರ್ಗಾವಣೆಯಿಂದ ಭರ್ತಿ ಮಾಡಲು ರಿಕ್ತಸ್ಥಾನಗಳ ಲಭ್ಯತೆ ವಿರಳವಾಗಿರುತ್ತದೆ. ಈ ಹಿನ್ನಲೆಯಲ್ಲಿ ಈ ಕೆಳಗೆ ನಮೂದಿಸಿರುವ ಕಾರಣಗಳಿಂದಾಗಿ ಪೊಲೀಸ್ ಹೆಡ್ ಕಾನ್ಸ್‌ಟೇಬಲ್‌ಗಳ ಹುದ್ದೆಗಳ ಪ್ರಕರಣದಲ್ಲಿ 7 ವರ್ಷಗಳ ಸೇವೆ ಸಲ್ಲಿಸುವ ಷರತ್ತನ್ನು ಸಡಿಲಿಕೆ ಮಾಡುವುದು ಸೂಕ್ತವಾಗಿರುವುದಿಲ್ಲ.

1) ಒಂದೇ ಬ್ಯಾಚ್ನಲ್ಲಿ ಆಯ್ಕೆಯಾಗಿರುವ ಸಿಬ್ಬಂದಿಗಳು ಕೆಲವು ಘಟಕಗಳಲ್ಲಿ ಆಯಾ ಘಟಕಗಳ ರಿಕ್ತ ಹುದ್ದೆಗಳ ಅನುಗುಣವಾಗಿ ಬೇಗನೇ ಮುಂಬಡ್ತಿ ಹೊಂದುವುದಾಗಿದ್ದು, ಮುಂಬಡ್ತಿ ನಂತರ ಇತರೆ ಘಟಕಕ್ಕೆ ವರ್ಗಾವಣೆ ಹೊಂದಿದ್ದಲ್ಲಿ ಆ ಘಟಕದಲ್ಲಿ ಇವರ ಬ್ಯಾಚ್ಗಿಂತ ಹಿರಿಯರಾಗಿರುವ ಮತ್ತು ಮುಂಬಡ್ತಿ ನಿರೀಕ್ಷಣೆಯಲ್ಲಿರುವ ಕಾನ್ಸ್‌ಟೇಬಲ್ ರವರುಗಳು ಮುಂಬಡ್ತಿ ವಂಚಿತರಾಗುತ್ತಾರೆ.

**ಉದಾಹರಣೆ 1:** ಬೆಂಗಳೂರು ನಗರದಲ್ಲಿ ಹೆಡ್ ಕಾನ್ಸ್ಟೇಬಲ್ ಹುದ್ದೆಗೆ 2012ನೇ ಬ್ಯಾಚ್ ಸಿಬ್ಬಂದಿಗಳು ಮುಂಬಡ್ತಿ ಹೊಂದುತ್ತಿದ್ದು, ಬೆಳಗಾವಿ ಜಿಲ್ಲೆಯಲ್ಲಿ 2009, 2010 ಬ್ಯಾಚ್ ಸಿಬ್ಬಂದಿಗಳ ಮುಂಬಡ್ತಿ ನಿರೀಕ್ಷಣೆಯಲ್ಲಿರುತ್ತಾರೆ. ಈ ಸಂದರ್ಭದಲ್ಲಿ ಪತಿ–ಪತ್ನಿ ಪ್ರಕರಣದಲ್ಲಿ ಸೇವಾ ಸಡಿಲಿಕೆ ಮಾಡಿ ಬೆಂಗಳೂರು ನಗರದ ಸಿಬ್ಬಂದಿಯನ್ನು ಮುಂಬಡ್ತಿ ನಂತರ ಬೆಳಗಾವಿ ಜಿಲ್ಲೆಗೆ ವರ್ಗಾವಣೆ ಮಾಡಿದ್ದಲ್ಲಿ ಬೆಳಗಾವಿ ಜಿಲ್ಲೆಯಲ್ಲಿನ ಸಿಬ್ಬಂದಿಗಳು ಮುಂಬಡ್ತಿಯಿಂದ ವಂಚಿತರಾಗುತ್ತಾರೆ.

**ಉದಾಹರಣೆ 2.** ಧಾರವಾಡ ಜಿಲ್ಲೆಯಲ್ಲಿ 2012 ನೇ ಬ್ಯಾಚ್‌ನ ಮುಂಬಡ್ತಿ ನಂತರ 2013 ನೇ ಬ್ಯಾಚ್‌ನ ಮೊದಲನೇ ಸಿಬ್ಬಂದಿಯು ಮುಂಬಡ್ತಿ ನಿರೀಕ್ಷಣೆಯಲ್ಲಿದ್ದು, ಈ ಸಂಧರ್ಭದಲ್ಲಿ 2012 ಬ್ಯಾಚಿನ ಬೆಂಗಳೂರು ನಗರ ಘಟಕದ ಸಿಬ್ಬಂದಿಯನ್ನು ಧಾರವಾಡ ನಗರಕ್ಕೆ ವರ್ಗಾವಣೆ ಮಾಡಿದಲ್ಲಿ, 2013 ರ ಬ್ಯಾಚಿನ ಮುಂಬಡ್ತಿ ನಿರೀಕ್ಷಣೆಯಲ್ಲಿರುವ ಸಿಬ್ಬಂದಿಯು ಮುಂಬಡ್ತಿಯಿಂದ ವಂಚಿತರಾಗುತ್ತಾರೆ.

1) ಸೇವೆಯಲ್ಲಿ ಹಿರಿಯ ಕಿರಿಯ ನೌಕರರ ಸೇವಾ ತಾರತಮ್ಯ ಉಂಟಾಗುವ ಸಾಧ್ಯತೆಗಳು ಹೆಚ್ಚಾಗುತ್ತವೆ.

2) ಸೇವೆಗೆ ಸೇರುವಾಗ ನೇಮಕಾತಿ ಹೊಂದುವ ಜಿಲ್ಲೆಯನ್ನು ಆಯ್ಕೆ ಮಾಡಿ ನೇಮಕಾತಿ ಹೊಂದಲು ಅವಕಾಶವಿದ್ದು, ನೇಮಕಾತಿ ಹಾಗೂ ಮುಂಬಡ್ತಿ ಅವಕಾಶ ಪಡೆದ ಸಿಬ್ಬಂದಿಗಳಿಂದಾಗಿ ಹಿರಿಯ ಮತ್ತು ಕಿರಿಯ ಸಿಬ್ಬಂದಿಗಳ ವೃಂದ ನಿರ್ವಹಣೆ ಮೇಲೆ ಪರಿಣಾಮ ಬೀರುತ್ತದೆ.

3) ಕರ್ನಾಟಕ ಸಾಮಾನ್ಯ ನೇಮಕಾತಿ ನಿಯಮಗಳ–1977ರ ನಿಯಮ 16(ಎ) ಪುನರ್ ಸೇರ್ಪಡೆಗೊಳಿಸಿದ ನಿಯಮಗಳಲ್ಲಿ ಪತಿ ಪತ್ನಿ ಪ್ರಕರಣಗಳಿಗೆ ಮಾತ್ರ ಅವಕಾಶ ಕಲ್ಪಿಸಿದ್ದು 7 ವರ್ಷಗಳ ಸೇವೆಯನ್ನು ನಿಗದಿಪಡಿಸಿರುತ್ತದೆ. ಇದರಿಂದಾಗಿ ವಿಶೇಷ ನಿಯಮದಲ್ಲಿ ಸೇವಾ ಸಡಲಿಕೆಗೆ ಅವಕಾಶವಿರುವುದಿಲ್ಲ.

**ಒಇ 72 ಪಿಪಿಎಸ್ 2025**

(ಡಾ|| ಜಿ.ಪರಮೇಶ್ವರ)
ಗೃಹ ಸಚಿವರು

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿ ರವರು ನಿಯಮ–72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:**

ಸರ್ಕಾರದ ಆದೇಶ ಸಂಖ್ಯೆ : ಬೆಂಗಳೂರು, ದಿನಾಂಕ 15–07–2024 ರ ಆದೇಶದಲ್ಲಿ ಅಂತರ್ ಜಿಲ್ಲಾ ವರ್ಗಾವಣೆ ಬಯಸಿದವರು ಒಂದು ಹುದ್ದೆಯಲ್ಲಿ ಕನಿಷ್ಠ 7 ವರ್ಷ ಸೇವೆ ಸಲ್ಲಿಸಿದ ಬಳಿಕ ವರ್ಗಾವಣೆಗೆ ಅರ್ಹರೆಂದು ಮಾರ್ಗಸೂಚಿ ಹೊರಡಿಸಲಾಗಿದೆ.

ಸರ್ಕಾರದ ಈ ಮಾರ್ಗಸೂಚಿಯಿಂದಾಗಿ 10–14 ವರ್ಷಗಳ ಕಾಲ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿ ಪೊಲೀಸ್ ಹೆಡ್ ಕಾನ್ಸ್‌ಟೇಬಲ್‌ಗಳಾಗಿ ಪದೋನ್ನತಿ ಹೊಂದಿ ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಹೆಡ್ ಕಾನ್ಸ್‌ಟೇಬಲ್‌ಗಳ ವರ್ಗಾವಣೆಗೆ ತುಂಬಾ ತೊಂದರೆಯಾಗಿದೆ. 2020 ರಿಂದ ಈವರೆಗೆ ಒಮ್ಮೆಯೂ ಪತಿ–ಪತ್ನಿ ಪ್ರಕರಣದಡಿ ಹೆಡ್ ಕಾನ್ಸ್‌ಟೇಬಲ್‌ಗಳ ವರ್ಗಾವಣೆ ಆಗಿರುವುದಿಲ್ಲ. ಇದು ಅನೇಕ ಕುಟುಂಬಗಳಲ್ಲಿ ಸಮಸ್ಯೆಗಳನ್ನು ಸೃಷ್ಟಿಸಿದ್ದರೆ ಇನ್ನೂ ಕೆಲವು ಕುಟುಂಬಗಳಲ್ಲಿ ವಿವಾಹ ವಿಚ್ಛೇದನೆ ಹಂತಕ್ಕೆ ಹೋಗಿದೆ.

ಈ ಸಿಬ್ಬಂದಿಗಳು ತಮ್ಮ ಸಮಸ್ಯೆಯನ್ನು ಸಚಿವರಾದಿಯಾಗಿ ಸಂಬಂಧಪಟ್ಟವರ ಗಮನಕ್ಕೆ ಹಲವು ಬಾರಿ ತಂದಿದ್ದರೂ ಈವರೆಗೆ ಯಾವುದೇ ಪರಿಹಾರ ದೊರೆತಿಲ್ಲ. ಸರ್ಕಾರ ಕೂಡಲೆ ಹೆಡ್ ಕಾನ್ಸ್‌ಟೇಬಲ್ ಪತಿ–ಪತ್ನಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಈ ಹಿಂದೆ ಹೊರಡಿಸಿರುವ ಮಾರ್ಗ ಸೂಚಿಯಲ್ಲಿರುವ 07 ವರ್ಷಗಳ ಸೇವೆ ಸಲ್ಲಿಸುವ ಷರತ್ತನ್ನು ಪೊಲೀಸ್ ಹೆಡ್– ಕಾನ್ಸ್‌ಟೇಬಲ್‌ಗಳ ಪ್ರಕರಣಗಳಿಗೆ ಸಡಿಲಿಕೆ ಮಾಡಿ ಇವರಿಗೆ ವರ್ಗಾವಣೆಗೆ ಅವಕಾಶವನ್ನು ಕಲ್ಪಿಸುವ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಅಧಿಕಾರಿ/ಸಿಬ್ಬಂದಿಗಳಿಗೆ ಅಂತರ್ ವಲಯ ಹಾಗೂ ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆಗೆ ಅವಕಾಶ ಕಲ್ಪಿಸುವ ಸಲುವಾಗಿ ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು 2022 ಅನ್ನು ರೂಪಿಸಿ ದಿನಾಂಕ: 22.02.2023 ರಿಂದ ಜಾರಿಗೆ ತರಲಾಗಿರುತ್ತದೆ ಹಾಗೂ ಈ ನಿಯಮಗಳಲ್ಲಿ ಕರ್ನಾಟಕ ಸಾಮಾನ್ಯ ನೇಮಕಾತಿ ನಿಯಮಗಳ– 1977ರ ನಿಯಮ 16(ಎ) ಪುನರ್ ಸೇರ್ಪಡೆ ನಿಯಮಗಳನ್ನು ಅಳವಡಿಸಲಾಗಿರುತ್ತದೆ (ಅನುಬಂಧ–ಎ ರಲ್ಲಿ ಒದಗಿಸಿದೆ).

ಪತಿ–ಪತ್ನಿ ಪ್ರಕರಣಗಳ ವರ್ಗಾವಣೆಗಳನ್ನು ಪರಿಗಣಿಸುವ ಉದ್ದೇಶದಿಂದಲೇ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಿಆಸುಇ 215 ಸೇನೀನಿ 2022 ದಿನಾಂಕ: 09.03.2023 ರಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ಕ್ಕೆ ನಿಯಮ 16ಎ ಅನ್ನು ಪುನರ್ ಸೇರ್ಪಡೆ ಮಾಡಿರುತ್ತದೆ. ಈ ಪುನರ್ ಸೇರ್ಪಡೆ ಅಧಿಸೂಚನೆಯಲ್ಲಿ ಪತಿ–ಪತ್ನಿ ಇಬ್ಬರೂ ಸರ್ಕಾರಿ ಸೇವೆಯಲ್ಲಿ ಇರುವ ಪ್ರಕರಣಗಳಿಗೆ ಮಾತ್ರ ಈ ಕೆಳಕಂಡ ಷರತ್ತಿಗೆ ಒಳಪಟ್ಟು ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. (ಅನುಬಂಧ–ಬಿ ರಲ್ಲಿ ಒದಗಿಸಿದೆ).

- ಒಬ್ಬ ಸರ್ಕಾರಿ ನೌಕರನು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಕನಿಷ್ಟ 07 ವರ್ಷ ಸೇವೆಯನ್ನು ಪೂರ್ಣಗೊಳಿಸಿರಬೇಕು.

- ವರ್ಗಾಹಿಸಬೇಕಾದ ಘಟಕ ಅಥವಾ ಸ್ಥಳದಲ್ಲಿ ಮಂಜೂರಾದ ಹುದ್ದೆಯು ಖಾಲಿಯಿರತಕ್ಕದ್ದು.
- ಅಂತಹ ವರ್ಗಾವಣೆಯನ್ನು ಒಂದು ಕೇಡರ್ನಿಂದ ಮತ್ತೊಂದು ಕೇಡರಿಗೆ ಮಾಡತಕ್ಕದಲ್ಲ.
- ವರ್ಗಾವಣೆಯನ್ನು ಸರ್ಕಾರಿ ನೌಕರನ ಕೋರಿಕೆ ಮೇಲೆ ಮಾಡಿರುವುದರಿಂದ ಅವರ ಜೇಷ್ಠತೆಯನ್ನು ವರ್ಗಾವಣೆಗೊಂಡ ಘಟಕದಲ್ಲಿನ ಕೇಡರ್ನ ಕೊನೆಯ ವ್ಯಕ್ತಿಯ ಕೆಳಗಿರಿಸತಕ್ಕುದ್ದು.
- ವರ್ಗಾವಣೆಯನ್ನು ಸರ್ಕಾರಿ ನೌಕರನ ಸೇವೆಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮಾಡತಕ್ಕುದಲ್ಲ.

ಇಲಾಖೆಯ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ವಿಶೇಷ ನಿಯಮಗಳ ಅಡಿಯಲ್ಲಿ ವರ್ಗಾವಣೆಗಳನ್ನು ಮಾಡಲು ಸರ್ಕಾರವು ಆದೇಶ ಸಂಖ್ಯೆ: ಒಇ 93 ಪಿಪಿಎಸ್ 2022, ದಿನಾಂಕ: 15.07.2024 ರಂದು ಮಾರ್ಗಸೂಚಿಯನ್ನು ಸಹ ಹೊರಡಿಸಿರುತ್ತದೆ (ಅನುಬಂಧ-ಸಿ ರಲ್ಲಿ ಒದಗಿಸಿದೆ). ಈ ಆದೇಶದಲ್ಲಿ ನಿರ್ದಿಷ್ಟಪಡಿಸಿರುವಂತೆ ಆನ್ಲೈನ್ ಪೋರ್ಟಲ್ನಲ್ಲಿ ಸಲ್ಲಿಕೆಯಾಗುವ ಮನವಿಗಳನ್ನು ವರ್ಗಾವಣೆ ಬಯಸುವ ಘಟಕದಲ್ಲಿನ ರಿಕ್ತ ಸ್ಥಾನವು ಶೇಕಡಾ 15ನ್ನು ಮೀರದಿರುವ ನಿರ್ಬಂಧನೆ ಹಾಗೂ ಪ್ರತಿ ವೃಂದದಲ್ಲಿನ ಸೇವಾ ಜ್ಯೇಷ್ಠತೆಯ ಆಧಾರದ ಮೇಲೆ ಮಾತ್ರ ಪರಿಗಣಿಸಲಾಗುತ್ತಿದ್ದು, ಮೊದಲನೆ ಆದ್ಯತೆಯನ್ನು ಪತಿ-ಪತ್ನಿ ಪ್ರಕರಣಕ್ಕೆ ನೀಡಲಾಗುತ್ತದೆ.

ಈ ಸರ್ಕಾರದ ಆದೇಶಗಳನ್ವಯ ರಿಕ್ತಸ್ಥಾನದ ಲಭ್ಯತೆ, ಉಭಯ ಘಟಕಗಳ ಸಹಮತಿ ಮತ್ತು ಸೇವಾ ಜ್ಯೇಷ್ಠತೆಯ ಆಧಾರದ ಮೇಲೆ ಸೇವಾ ಜೇಷ್ಠತೆಯಲ್ಲಿ ಅಂತರ ಜಿಲ್ಲಾ ವರ್ಗಾವಣೆ ಕೋರಿ ಇಲಾಖೆಯಲ್ಲಿ ಸ್ವೀಕೃತವಾಗಿರುವ ವರ್ಗಾವಣಾ ಅರ್ಜಿಗಳನ್ನು ಇಲಾಖೆಯ ಆಡಳಿತ ನಿರ್ವಹಣೆ ಹಾಗೂ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ಧಕ್ಕೆಯಾಗದ ರೀತಿಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು 2022 ದಿನಾಂಕ: 22.02.2023 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಒಇ 93 ಪಿಪಿಎಸ್ 2022, ದಿನಾಂಕ: 15.07.2024 ರನ್ವಯ ಹಂತಹಂತವಾಗಿ ಪತಿ-ಪತ್ನಿ ಪ್ರಕರಣದ ಸಿಬ್ಬಂದಿಗಳನ್ನು ವರ್ಗಾವಣೆಗೆ ಪರಿಗಣಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹೆಡ್‌ಕಾನ್‌ಸ್ಟೇಬಲ್ ಹುದ್ದೆಯು ಸಂಪೂರ್ಣವಾಗಿ ಮುಂಬಡ್ತಿ ಹುದ್ದೆಯಾಗಿದ್ದು, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಮುಂಬಡ್ತಿಗೆ ಮಾತ್ರ ಅವಕಾಶ ಕಲ್ಪಿಸಲಾಗಿರುತ್ತದೆ. ಈ ಹುದ್ದೆಯು ಮುಂಬಡ್ತಿ ಹುದ್ದೆಯಾಗಿರುವುದರಿಂದ ಆಯಾ ಘಟಕಗಳಲ್ಲಿ ರಿಕ್ತ ಹುದ್ದೆ ಲಭ್ಯವಾದ ತಕ್ಷಣ ಆಗಿಂದಾಗ್ಗೆ ಅಯಾ ಜೇಷ್ಠತಾ ಘಟಕದ ಜೇಷ್ಠತೆ, ಮುಂಬಡ್ತಿ ಅರ್ಹತೆ, ಮೀಸಲಾತಿ ಬಿಂದು ಹಾಗೂ ರಿಕ್ತ ಸ್ಥಾನ ಲಭ್ಯತೆ ಆಧರಿಸಿ ಮುಂಬಡ್ತಿ ನೀಡಿ ಭರ್ತಿ ಮಾಡಲಾಗುತ್ತಿದೆ. ಇದರಿಂದಾಗಿ ವರ್ಗಾವಣೆಯಿಂದ ಭರ್ತಿ ಮಾಡಲು ರಿಕ್ತಸ್ಥಾನಗಳ ಲಭ್ಯತೆ ವಿರಳವಾಗಿರುತ್ತದೆ. ಈ ಹಿನ್ನಲೆಯಲ್ಲಿ ಈ ಕೆಳಗೆ ನಮೂದಿಸಿರುವ ಕಾರಣಗಳಿಂದಾಗಿ ಪೊಲೀಸ್ ಹೆಡ್ ಕಾನ್‌ಸ್ಟೇಬಲ್‌ಗಳ ಹುದ್ದೆಗಳ ಪ್ರಕರಣದಲ್ಲಿ 7 ವರ್ಷಗಳ ಸೇವೆ ಸಲ್ಲಿಸುವ ಷರತ್ತನ್ನು ಸಡಿಲಿಕೆ ಮಾಡುವುದು ಸೂಕ್ತವಾಗಿರುವುದಿಲ್ಲ.

1) ಒಂದೇ ಬ್ಯಾಚ್ನಲ್ಲಿ ಆಯ್ಕೆಯಾಗಿರುವ ಸಿಬ್ಬಂದಿಗಳು ಕೆಲವು ಘಟಕಗಳಲ್ಲಿ ಆಯಾ ಘಟಕಗಳ ರಿಕ್ತ ಹುದ್ದೆಗಳ ಅನುಗುಣವಾಗಿ ಬೇಗನೇ ಮುಂಬಡ್ತಿ ಹೊಂದುವುದಾಗಿದ್ದು, ಮುಂಬಡ್ತಿ ನಂತರ ಇತರೆ ಘಟಕಕ್ಕೆ ವರ್ಗಾವಣೆ ಹೊಂದಿದ್ದಲ್ಲಿ ಆ ಘಟಕದಲ್ಲಿ ಇವರ ಬ್ಯಾಚ್ಗಿಂತ ಹಿರಿಯರಾಗಿರುವ ಮತ್ತು ಮುಂಬಡ್ತಿ ನಿರೀಕ್ಷಣೆಯಲ್ಲಿರುವ ಕಾನ್‌ಸ್ಟೇಬಲ್ ರವರುಗಳು ಮುಂಬಡ್ತಿ ವಂಚಿತರಾಗುತ್ತಾರೆ.